11	ದಕ್ಷಿಣ ಕನ್ನಡ	1,281.00	1,448.00	–
12	ದಾವಣಗೆರೆ	1,019.50	2,496.00	–
13	ಧಾರವಾಡ	1,283.00	691.00	–
14	ಗದಗ್	1,490.00	760.00	–
15	ಗುಲ್ಬರ್ಗ	2,516.00	2,042.00	–
16	ಹಾಸನ	646.00	883.00	–
17	ಹಾವೇರಿ	812.00	1,307.00	–
18	ಕೊಡಗು	1,352.55	867.00	–
19	ಕೋಲಾರ	2,457.75	1,846.00	–
20	ಕೊಪ್ಪಳ	848.00	1,343.50	–
21	ಮಂಡ್ಯ	798.00	1,111.25	–
22	ಮೈಸೂರು	2,323.15	1,378.50	–
23	ರಾಯಚೂರು	923.00	605.50	–
24	ಶಿವಮೊಗ್ಗ	2,607.00	2,925.50	–
25	ತುಮಕೂರು	2,259.00	2,754.00	–
26	ಉಡುಪಿ	145.00	94.00	–
27	ಉತ್ತರ ಕನ್ನಡ	8,033.00	8,899.00	–
28	ಸಂತೋಧನೆ	529.00	46.00	–
	ಒಟ್ಟು	**39,904.45**	**42,407.75**	–

620 (1120) ಶ್ರೀ ಬೋಪಯ್ಯ. ಕೆ.ಜಿ. (ಮಡಿಕೇರಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊಡಗು ಜಿಲ್ಲೆಯಲ್ಲಿ ಕಂದಾಯ ಇಲಾಖೆಗೆ ಸಂಬಂಧಪಟ್ಟಂತೆ ಎಷ್ಟು ಹುದ್ದೆಗಳು ಖಾಲಿ ಇವೆ? (ವಿವರಗಳನ್ನು ಒದಗಿಸುವುದು)

ಆ) ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ಪ್ರಸ್ತುತ 24 ಹುದ್ದೆಗಳು ಕಂದಾಯ ಇಲಾಖೆಯಲ್ಲಿ ಖಾಲಿ ಇರುತ್ತದೆ.

1. ಉಪವಿಭಾಗಾಧಿಕಾರಿ	1
2. ಶಿರಸ್ತೇದಾರ್	10
3. ಪ್ರ.ದ.ಸ.	6
4. ಬೆರಳಚ್ಚುಗಾರರು	7
ಒಟ್ಟು	**24**

ಆ) ಉಪವಿಭಾಗಾಧಿಕಾರಿ ಹುದ್ದೆಯನ್ನು ವರ್ಗಾವಣೆಯ ಮೂಲಕ ಭರ್ತಿ ಮಾಡಲಾಗುವುದು. ಶಿರಸ್ತೇದಾರರ ಹುದ್ದೆಗಳನ್ನು ಮುಂಬಡ್ತಿ ಮೂಲಕ ಭರ್ತಿ ಮಾಡಲಾಗುವುದು. ಕರ್ನಾಟಕ ಲೋಕಸೇವಾ ಆಯೋಗವು ಇತ್ತೀಚೆಗೆ ಪ್ರ.ದ.ಸ. ಹುದ್ದೆಗಳ ಆಯ್ಕೆ ಪಟ್ಟಿ ಪ್ರಕಟಿಸಿದೆ. ಕೆ.ಪಿ.ಎಸ್.ಸಿ.ಯಿಂದ ಬರುವ ಅಭ್ಯರ್ಥಿಗಳಿಂದ ತುಂಬಲಾಗುವುದು. ಬೆರಳಚ್ಚುಗಾರರ ಹುದ್ದೆಗಳನ್ನು ಬೆರಳಚ್ಚುಗಾರರ ಆಯ್ಕೆ ಸಮಿತಿಯಿಂದ ಆಯ್ಕೆಯಾಗಿ ಬರುವ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.

621 (1121) ಶ್ರೀ ಬೋಪಯ್ಯ. ಕೆ.ಜಿ. (ಮಡಿಕೇರಿ): ಮಾನ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊಡಗಿನಲ್ಲಿ ಕಾಡಾನೆ ಹಾವಳಿ ನಿಯಂತ್ರಿಸಲು ಸೋಲಾರ್ ಬೇಲಿ ನಿರ್ಮಿಸಲು ಈವರೆಗೆ ಖರ್ಚಾದ ಹಣವೆಷ್ಟು;

ಆ) ಎಷ್ಟು ಉದ್ದದ ಬೇಲಿಯನ್ನು ಎಲ್ಲೆಲ್ಲಿ ಹಾಕಲಾಗಿದೆ (ಕ್ಷೇತ್ರವಾರು ಮಾಹಿತಿ ನೀಡುವುದು);

ಇ) ಸೋಲಾರ್ ಬೇಲಿ ನಿರ್ಮಿಸುವಲ್ಲಿ ಸಾಕಷ್ಟು ಕಳಪೆ ಕಾಮಗಾರಿ ನಡೆದಿದೆ ಎಂಬ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಸರ್ಕಾರದ ನಿಲುವೇನು?

ಶ್ರೀ ಸಿ. ಚನ್ನಿಗಪ್ಪ (ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ರೂ. 93,89,970/–

ಆ)

ಮಡಿಕೇರಿ ವಿಭಾಗ	**ಕಿ.ಮೀ.ಗಳಲ್ಲಿ**
ಆನೆಕಾಡು ಶಾಖೆ–ಸೋಮವಾರಪೇಟೆ ತಾಲ್ಲೂಕು	7.30
ಕಕ್ಕೆಹೊಳೆ–ಕಾಜೂರು	8.10
ಅಬ್ಬೂರು ಕಟ್ಟೆ	5.00
ಮೀನುಕೊಲ್ಲೆ ಶಾಖೆ	5.10
ಕಂಬಿಬಾಣೆ – ಚಿಕ್ಲಹೊಳೆ	5.90
ಚೆಟ್ಟಳ್ಳಿ–ಕೊಡ್ಲೂರು–ವಾಲ್ನೂರು	7.10
ಮಾಲ್ದಾರೆ	6.50
ಜೇನುಕಲ್ಲು ಬೆಟ್ಟ – ಚೆನ್ನನಹಳ್ಳಿ	4.00
ಕಾಜೂರು–ಎಡನಪಾರೆ–ಹಾರಂಗಿ–ಎಡವನಾಡು	7.85
ಆಡಿನಾಡೂರು–ವಾಲ್ನೂರು	2.50
ಏತನೀರಾವರಿ–ಕಕೆಹೊಳೆ	5.00
ಯಲಕ್‌ನೂರು–ಹೊಸೂರು	2.50
ಕಡ್ಲೂರು–ಚೆಟ್ಟಳ್ಳಿ–ವಾಲ್ನೂರು	3.00
ವಾಲ್ನೂರು–ನಂಜರಾಯಪಟ್ಟಣ	4.00
ನಂಜರಾಯಪಟ್ಟಣ–ಹೊಸಪಟ್ಟಣ	3.80
ಒಟ್ಟು	**77.65**